

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02–07–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿದೆ. ಈ ಸಂಬಂಧವಾಗಿ ಇಂದೂ ಪ್ರಸ್ತಾಪಿಸುವೆನು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಕ್ರೈಸ್ತರು ಮತ್ತು ಯಹೂದಿಯರ ಅಧೀನದಲ್ಲಿದ್ದ ಯಮನಿನ ಜಮೀನಿಗೆ ನಿಯಮಾನುಸಾರ ಸರ್ಕಾರವೇ ಮಾಲಿಕತ್ವವನ್ನು ಹೊಂದಿತ್ತು. ಆದರೆ ಅವರನ್ನು ಹಝ್ರತ್ ಉಮರ್(ರ) ಅರೇಬಿಯದಿಂದ ಹೊರಕ್ಕಟ್ಟಿದ್ದಾಗ ಅವರಿಂದ ಆ ಭೂಪ್ರದೇಶವನ್ನು ಕಸಿದುಕೊಳ್ಳಲಿಲ್ಲ. ಬದಲಾಗಿ ಅವುಗಳನ್ನು ಖರೀದಿ ಮಾಡಿದರು. ಬುಖಾರಿಯ ಶರಹ್ ಫತಹುಲ್ ಬಾರಿಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ನಜ್‌ರಾನಿನ ಮುಶ್ರಿಕರನ್ನು, ಯಹೂದಿಯರನ್ನು ಮತ್ತು ಕ್ರೈಸ್ತರನ್ನು ದೇಶದಿಂದ ಹೊರಕ್ಕಟ್ಟಿದಾಗ ಅವರ ತುಂಡುಭೂಮಿಗಳನ್ನೂ ತೋಟಗಳನ್ನೂ ಅವರಿಂದ ಖರೀದಿ ಮಾಡಿದರು.

ಇಸ್ಲಾಮಿನಲ್ಲಿ ಯುದ್ಧಕೈದಿಗಳನ್ನು ಹೊರತುಪಡಿಸಿ ಇತರರನ್ನು ಗುಲಾಮರನ್ನಾಗಿ ಮಾಡುವುದನ್ನು ನಿಷೇಧಿಸಲಾದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ: "ಎಲೈ ಮುಸ್ಲಿಮರೇ, ಇತರ ಜನರು ಮಾಡುವ ರೀತಿಯಲ್ಲಿ ಅನ್ಯ ಸಮುದಾಯಗಳ ಜನರನ್ನು ಹಿಡಿದುಕೊಂಡು ತಮ್ಮ ಶಕ್ತಿಯನ್ನು ವರ್ಧಿಸಲು ನೀವು ಬಯಸುತ್ತೀರಾ? ಹಾಗೆ ಮಾಡುವುದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಬದಲಾಗಿ ಪರಿಣಾಮದ ದೃಷ್ಟಿಯಲ್ಲಿ ನಿಮಗೆ ಉತ್ತಮವಾಗಿರುವಂತಹ ಆಜ್ಞೆಗಳ ಪ್ರಕಾರ ನಿಮ್ಮನ್ನು ನಡೆಸಲು ಅವನು ಬಯಸುತ್ತಾನೆ. ಆದ್ದರಿಂದ ನೀವು ಯುದ್ಧದ ವೇಳೆ ಬಂಧಿಸಲಾಗುವ ಯುದ್ಧ ಕೈದಿಗಳನ್ನಲ್ಲದೆ ಬೇರೆ ಯಾರನ್ನೂ ಕೈದಿಯನ್ನಾಗಿ ಮಾಡಬೇಡಿರಿ."

ಇಸ್ಲಾಮಿನ ಆರಂಭ ಕಾಲದಲ್ಲಿ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿತ್ತು. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಯಮನಿನಿಂದ ಒಂದು ಸಂಘ ಬಂದಿತು. ಇಸ್ಲಾಮಿಗೆ ಮುಂಚೆ ಕ್ರೈಸ್ತರು ಅವರನ್ನು ವಿನಾ ಕಾರಣ ಗುಲಾಮರನ್ನಾಗಿ ಮಾಡಿದ್ದರು ಎಂದು ಆ ಸಂಘದವರು ದೂರಿದರು. ನಾನು ಅದರ ಬಗ್ಗೆ ಅನ್ವೇಷಣೆ ನಡೆಸುವೆನು ಎಂದು ಹಝ್ರತ್ ಉಮರ್(ರ) ಹೇಳಿದರು.

ಹಿಜರೀ 18ರಲ್ಲಿ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಮದೀನ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಠಿಣವಾದ ಬರಗಾಲ ಬಂದಿತ್ತು. ಮಳೆಯಿಲ್ಲದ ಕಾರಣದಿಂದ ಭೂಪ್ರದೇಶವೆಲ್ಲ ಕಪ್ಪು ಬೂದಿಯಂತೆ ಆಗಿತ್ತು. ಈ ಅವಸ್ಥೆ ಒಂಬತ್ತು ತಿಂಗಳುಗಳಷ್ಟು ಕಾಲ ಮುಂದುವರಿಯಿತು. ಈ ವರ್ಷವನ್ನು **ಆಮುರ್ರಿಮಾದ** ಎಂದರೆ, ಬೂದಿಯ ವರ್ಷವೆಂದು ಹೇಳಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಈಜಿಪ್ಟಿನ ಅಧಿಕಾರಿಯಾಗಿದ್ದ ಅಮ್ರ್ ಬಿನ್ ಅಲ್‌ಆಸ್‌ರಿಗೆ ಸಹಾಯಕ್ಕಾಗಿ ಹಝ್ರತ್ ಉಮರ್(ರ) ಪತ್ರ ಬರೆದರು. ಆಗ ದವಸಧಾನ್ಯಗಳನ್ನು ಒಳಗೊಂಡ ಒಂದು ಸಾವಿರ ಒಂಟೆಗಳನ್ನು ಹಝ್ರತ್ ಅಮ್ರ್ ಬಿನ್ ಅಲ್‌ಆಸ್ ಕಳುಹಿಸಿದರು. ತುಪ್ಪ ಮತ್ತು ಬಟ್ಟೆಗಳು ಇದಕ್ಕೆ ಹೊರತಾಗಿತ್ತು. ಇರಾಕಿನ ಅಧಿಕಾರಿಯಾಗಿದ್ದ ಹಝ್ರತ್ ಸಅದ್(ರ) ದವಸಧಾನ್ಯಗಳನ್ನು ಒಳಗೊಂಡು ಮೂರು ಸಾವಿರ ಒಂಟೆಗಳನ್ನು ಕಳುಹಿಸಿದರು. ಅವುಗಳನ್ನು ಹಝ್ರತ್ ಉಮರ್(ರ) ಗ್ರಾಮಪ್ರದೇಶಗಳಿಗೆ ಕಳುಹಿಸಿದರು. ಈ ಕಠಿಣವಾದ ದಿನಗಳಲ್ಲಿ ಹಝ್ರತ್ ಉಮರ್(ರ) ತನ್ನ ಮೇಲ್ನೋಟದಲ್ಲಿ ಊಟವನ್ನು ತಯಾರು ಮಾಡಿಸುತ್ತಿದ್ದರು, ಜನರೊಂದಿಗೆ ಸೇರಿಕೊಂಡು ಊಟ ಸೇವಿಸುತ್ತಿದ್ದರು. ನಿರಂತರವಾಗಿ ಉಪವಾಸವನ್ನು ಅನುಷ್ಠಿಸುತ್ತಿದ್ದರು. ಒಂದು ದಿನ ಒಂಟೆಯನ್ನು ಕೊಯ್ಯಲಾದಾಗ, ಸಂಜೆ ಸಮಯದಲ್ಲಿ ಹಝ್ರತ್ ಉಮರ್(ರ)ರ ಸನ್ನಿಧಿಯಲ್ಲಿ ಒಂಟೆಯ ಡುಬ್ಬ ಮತ್ತು ಕಲಿಜದ ತುಣುಕುಗಳನ್ನು ಇರಿಸಲಾಯಿತು. ಇದು ಎಲ್ಲಿಂದ ಬಂತು ಎಂದು ಹಝ್ರತ್ ಉಮರ್(ರ) ಕೇಳಿದರು. ಇಂದು ಕೊಯ್ಯಲಾದ ಒಂಟೆಗಳಿಂದ ಇವು ಲಭಿಸಿದ್ದುವು ಎಂದು ಅವರೊಡನೆ ಹೇಳಲಾಯಿತು. ಹಝ್ರತ್ ಉಮರ್(ರ) ಹೇಳಿದರು: **"ಅಕಟಾ!** ಉತ್ತಮ ಭಾಗವನ್ನು ನನಗೆ ಇರಿಸಿಕೊಂಡು ರದ್ದಿ ಭಾಗವನ್ನು ಜನರಿಗೆ ತಿನ್ನಿಸಿದರೆ ನಾನು ಎಷ್ಟು ನೀಚ ಮೇಲ್ನೋಟಗಾರನಾಗುವೆನು!" ಬರಗಾಲದ ದಿನಗಳಲ್ಲಿ ಇಶಾ ನಮಾಝಿನ ನಂತರ ತಡರಾತ್ರಿಯ ತನಕ ಹಝ್ರತ್ ಉಮರ್(ರ) ನಿರಂತರವಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ಮದೀನದ ಪರಿಸರ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದರು. ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡುತ್ತಿದ್ದರು: "ಹೇ ಅಲ್ಲಾಹ್, ನನ್ನ ಕೈಗಳಿಂದ ಹಝ್ರತ್ ಪೈಗಂಬರ್(ಸ)ರ ಉಮ್ಮತ್ತನ್ನು ನಾಶಕ್ಕೆ ನೂಕಬೇಡ."

ಇಬ್ನು ತಾವೂಸ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಜನರ ಸ್ಥಿತಿ ಉತ್ತಮಗೊಳ್ಳುವ ತನಕ ಹಝ್ರತ್ ಉಮರ್(ರ) ಮಾಂಸವನ್ನೋ ತುಪ್ಪವನ್ನೋ ಸೇವಿಸಿರಲಿಲ್ಲ. ಅಯಾಝ್ ಬಿನ್ ಖಲೀಫ ಹೇಳುತ್ತಾರೆ: ಬರಗಾಲದ ವರ್ಷದಲ್ಲಿ ಹಝ್ರತ್

ಉಮರ್(ರ)ರ ಮೈಬಣ್ಣ ಕಪ್ಪಾಗಿ ಬಿಟ್ಟಿತ್ತು. ಜನರು ಹೇಳುತ್ತಿದ್ದರು: ಅಲ್ಲಾಹನು ಬರಗಾಲವನ್ನು ನೀಗಿಸದಿದ್ದರೆ, ಹಝ್ರತ್ ಉಮರ್(ರ) ಮುಸ್ಲಿಮರ ಚಿಂತೆಯಲ್ಲಿ ಮೃತಪಡುವರು. ಮದೀನದ ಎಲ್ಲ ಪ್ರದೇಶಗಳಲ್ಲಿ ಮರಳುಗಾಡಿನ ಜನರು ಬಂದಿದ್ದರು. ಅನೇಕ ಸಹಾಬರ ಮೂಲಕ ಹಝ್ರತ್ ಉಮರ್(ರ) ಅವರ ಗಣತಿ ಮಾಡಿಸಿದರು. ಅವರೆಲ್ಲರ ಆಹಾರ ಪಾನೀಯದ ಏರ್ಪಾಡನ್ನು ಹಝ್ರತ್ ಉಮರ್(ರ) ಮಾಡಿದರು.

ಬರಗಾಲದ ದಿನಗಳು ಅತಿ ಕಠೋರವಾದಾಗ, ಹಝ್ರತ್ ಪೈಗಂಬರ್(ಸ) ದುಆ ಮಾಡಲು ಗಮನ ಸೆಳೆದದ್ದಾಗಿ ಒಬ್ಬ ವ್ಯಕ್ತಿ ಕನಸು ಕಂಡರು. ಹೀಗೆ ಹಝ್ರತ್ ಉಮರರ ನಿರ್ದೇಶನ ಪ್ರಕಾರ **ಇಸ್ತಿಸ್‌ಖಾ** ನಮಾಝ್ (ಎಂದರೆ ಮಳೆಗಾಗಿ ನಮಾಝ್) ಮಾಡಲಾಯಿತು. ವರದಿಗಾರ ಹೇಳುತ್ತಾರೆ: ನಮಾಝ್ ನಿರ್ವಹಿಸಿ ಹಝ್ರತ್ ಉಮರ್(ರ) ಮನೆಗೆ ತಲುಪುವುದಕ್ಕೆ ಮುಂಚಿತವಾಗಿ ಮೈದಾನ ಮಳೆಯ ಕಾರಣದಿಂದ ಕೆರೆಯಾಯಿತು.

ಮಸ್ಜಿದ್ ನಬವಿಯಲ್ಲಿ ಮೊಟ್ಟಮೊದಲು ಹಝ್ರತ್ ಉಮರರ ಖಿಲಾಫತ್ ಕಾಲದಲ್ಲಿ ಚಾಪೆ ಹಾಸಲಾಯಿತು. ಅವರ ಖಿಲಾಫತ್ ಕಾಲದಲ್ಲಿ ಹಿಜರೀ 17ರಲ್ಲಿ ಮಸ್ಜಿದ್ ನಬವಿಯನ್ನು ವಿಸ್ತಾರಗೊಳಿಸಲಾಯಿತು. ಈ ಕಾರ್ಯದಲ್ಲಿ ಖರ್ಚುವೆಚ್ಚಗಳನ್ನು ಕಡಿಮೆಗೊಳಿಸಲಿಕ್ಕಾಗಿ ಮಸೀದಿಯನ್ನು ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಕಾಲದ ಶೈಲಿಯಲ್ಲೇ ನಿರ್ಮಾಣ ಮಾಡಲಾಯಿತು. ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಜನಗಣತಿ ಆರಂಭಿಸಲಾಗಿತ್ತು. ಅದೇ ರೀತಿಯಲ್ಲಿ ಆಹಾರವನ್ನು ಒದಗಿಸಲಿಕ್ಕಾಗಿ ರೇಶನ್ ಪದ್ಧತಿಯನ್ನು ಸಹ ಪರಿಚಯಿಸಲಾಯಿತು.

ಇಸ್ಲಾಮಿಕ ಆಡಳಿತ ವ್ಯವಸ್ಥೆ ಹೇಗೆ ನಡೆಯುತ್ತಿತ್ತು ಎಂಬುದರ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮದೀನದಲ್ಲಿ ಬಂದು ಹಝ್ರತ್ ಪೈಗಂಬರ್(ಸ) ಮಾಡಿದ ಮೊದಲ ಕೆಲಸವೇನೆಂದರೆ, ಸೊತ್ತು ಸಂಪತ್ತು ಇರುವವರನ್ನು ಸೊತ್ತಿಲ್ಲದವರ ಸಹೋದರರನ್ನಾಗಿ ಮಾಡಿದರು. ಅನ್ಸಾರ್ ಮತ್ತು ಮುಹಾಜಿರರ ನಡುವೆ ಸ್ಥಾಪಿಸಲಾದ ಈ ಸಾಹೋದರ್ಯ ಸಂಬಂಧವು ಇಸ್ಲಾಂ ಮುಂದಿರಿಸುವ ಸಮತ್ವದ ಮೊದಲ ಉದಾಹರಣೆಯಾಗಿದೆ. ಅದೇ ರೀತಿಯಲ್ಲಿ ಒಂದು ಯುದ್ಧದ ಸಂದರ್ಭದಲ್ಲೂ ಎಲ್ಲರಿಗೂ ನ್ಯಾಯಯುತವಾಗಿ ಆಹಾರ ಲಭಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ರೇಷನ್ ನಿಶ್ಚಯಿಸಿದ್ದರು. ಬಹ್ರೈನಿನ ಅರಸ ಮುಸ್ಲಿಮನಾದಾಗ ಹಝ್ರತ್ ಪೈಗಂಬರ್(ಸ) ಅವರಿಗೆ ಹೀಗೆ ನಿರ್ದೇಶನ ನೀಡಿದರು: ನಿಮ್ಮ ದೇಶದಲ್ಲಿ ಕೃಷಿ ಮಾಡಲು ಭೂಮಿಯಿಲ್ಲದ ಜನರು ಹಸಿವಿನಿಂದ ಇರದಿರಲು ಮತ್ತು ಧರಿಸಲು ಬಟ್ಟೆಯಿಲ್ಲದಂತೆ ಆಗದಿರಲು ನೀವು ಅವರಿಗೆ ನಾಲ್ಕು ದಿರ್ಹಂ ಮತ್ತು ಬಟ್ಟೆಗಳನ್ನು ಕೊಡಬೇಕು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮುಸ್ಲಿಮರು ಲೋಕದ ವಿವಿಧ ಸ್ಥಳಗಳಲ್ಲಿ ಹರಡಿದಾಗ ಅವರಿಗೆ ಆಹಾರದ ವ್ಯವಸ್ಥೆ ಮಾಡುವುದು ಕಷ್ಟದಾಯಕವಾಯಿತು. ಇಂತಹ ಸ್ಥಿತಿಯಲ್ಲಿ ಹಝ್ರತ್ ಉಮರ್(ರ) ಎಲ್ಲ ಜನರ ಜನಗಣತಿಯನ್ನು ಮಾಡಿಸಿದರು ಮತ್ತು ಅವರಿಗೆ ಪಡಿತರ ವ್ಯವಸ್ಥೆ ಶುರುಮಾಡಿದರು. ಪ್ರಜೆಗಳಿಂದ ಸಂಪತ್ತನ್ನು ಕಸಿದುಕೊಳ್ಳಲಿಕ್ಕಾಗಿ ಹಝ್ರತ್ ಉಮರ್(ರ) ಜನಗಣತಿ ಮಾಡಿರಲಿಲ್ಲ. ಬದಲಾಗಿ ಅವರ ಅನ್ನದ ವ್ಯವಸ್ಥೆ ಮಾಡಲು ಜನಗಣತಿ ಮಾಡಲಾಗಿತ್ತು. ಜನರನ್ನು ಬಲಿಪಶು ಮಾಡಲಿಕ್ಕಾಗಿ ಮತ್ತು ಸೈನ್ಯಕ್ಕೆ ಭರ್ತಿ ಮಾಡಲಿಕ್ಕಾಗಿ ಲೋಕದ ಸರ್ಕಾರಗಳು ಜನಗಣತಿ ಮಾಡುತ್ತಾರೆ. ಆದರೆ ಜನರಿಗೆ ಆಹಾರ ಒದಗಿಸಲಿಕ್ಕಾಗಿ ಹಝ್ರತ್ ಉಮರ್(ರ) ಜನಗಣತಿ ಮಾಡಿಸಿದ್ದರು. ಇದು ಜನರ ಆವಶ್ಯಕತೆಗಳನ್ನು ಪೂರೈಸಲು ಇಸ್ಲಾಂ ಎತ್ತಿದ ಮೊದಲ ಹೆಜ್ಜೆಯಾಗಿತ್ತು. ಈ ವ್ಯವಸ್ಥೆ ಸ್ಥಾಪಿತವಾದ ನಂತರ ಬೇರೆ ವ್ಯವಸ್ಥೆ ಮಾಡುವ ಆವಶ್ಯಕತೆಯಿರುವುದಿಲ್ಲ. ಏಕೆಂದರೆ ಪೂರ್ತಿ ದೇಶದ ಆವಶ್ಯಕತೆಯ ಜವಾಬ್ದಾರಿ ಸರ್ಕಾರದ ಮೇಲೆ ಆಗುತ್ತದೆ. ಬಡವರ ಆಹಾರ ಮತ್ತು ವಸ್ತ್ರದ ಏರ್ಪಾಡನ್ನು ಸೋವಿಯಟ್ ರಶ್ಯ ಮಾಡಿತ್ತು ಎಂದು ಹೇಳಲಾಗುತ್ತದೆ. ಆದರೆ ಮೊಟ್ಟಮೊದಲು ಈ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಇಸ್ಲಾಂ ಜಾರಿ ಮಾಡಿತ್ತು. ಹಝ್ರತ್ ಉಮರ್(ರ)ರ ಕಾಲದಲ್ಲಿ ಪ್ರತಿಯೊಂದು ಹಳ್ಳಿ, ಗ್ರಾಮ ಮತ್ತು ಪಟ್ಟಣದಲ್ಲಿ ಜನರ ಹೆಸರು ರೆಜಿಸ್ಟರ್‌ನಲ್ಲಿ ನಮೂದಿಸಲಾಗುತ್ತಿತ್ತು. ಇಸ್ಲಾಮಿನ ಪ್ರಕಾರ ಪ್ರತಿಯೊಂದು ವ್ಯಕ್ತಿಗೆ ಊಟ, ವಸತಿ ಮತ್ತು ಬಟ್ಟೆಯನ್ನು ಒದಗಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಈಗ ಇತರ ಸರ್ಕಾರಗಳು ಸಹ ಇದನ್ನು ನಕಲು ಮಾಡುತ್ತಿವೆ. ವಿಮೆ ಮತ್ತು ಫ್ಯಾಮಿಲಿ ಪೆನ್ಶನ್ ಅದರದೇ ಬೇರೆ ರೂಪಗಳಾಗಿವೆ. ಆದರೆ ಯೌವ್ವನ ಮತ್ತು ವೃದ್ಧಾಪ್ಯ ಎಂಬೀ ಎರಡೂ ಸ್ಥಿತಿಯಲ್ಲೂ ಆಹಾರ ಮತ್ತು ವಸ್ತ್ರದ ಉತ್ತರಧಾಯಿತ್ವ ಸರ್ಕಾರದ್ದಾಗಿದೆ ಎಂಬ ನಿಯಮ ಇಸ್ಲಾಮಿಗಿಂತ ಮುಂಚೆ ಬೇರೆ ಯಾವುದೇ ಧರ್ಮ ಮುಂದಿರಿಸಿಲ್ಲ.

ಹಿಜರೀ 20ರಲ್ಲಿ ಆಡಳಿತ ಕಾರ್ಯಗಳನ್ನು ಸುಲಭಗೊಳ್ಳಲಿಕ್ಕಾಗಿ ಮುಸ್ಲಿಮರ ಅಧೀನದಲ್ಲಿದ್ದ ದೇಶಗಳನ್ನು ಹಝ್ರತ್ ಉಮರ್(ರ) ಎಂಟು ರಾಜ್ಯಗಳಾಗಿ ವಿಂಗಡಿಸಿದರು. ಅದೇ ರೀತಿಯಲ್ಲಿ ಅವರ ಖಿಲಾಫತ್ ಕಾಲದಲ್ಲಿ ಶೂರಾ (ಸಮಾಲೋಚನೆ ಸಮಿತಿ) ಸ್ಥಾಪಿಸಲಾಯಿತು. ಮಜ್ಲಿಸೇ ಶೂರಾದಲ್ಲಿ ಅನ್ಸಾರ್ ಮತ್ತು ಮುಹಾಜಿರರ ಶ್ರೇಷ್ಠ ಸಹಾಬರು ಸದಸ್ಯರಾಗಿದ್ದರು. ದಿನನಿತ್ಯದ ವಿಷಯಗಳಲ್ಲಿ ಈ ಸಭೆಯ ತೀರ್ಮಾನವು ಸಾಕಾಗಿತ್ತು. ಆದರೆ ಯಾವುದಾದರೂ ಮುಖ್ಯ ವಿಷಯ ಬರುವುದಾದರೆ ಮುಹಾಜಿರರ ಮತ್ತು ಅನ್ಸಾರರ ಸಾರ್ವಜನಿಕ ಸಭೆ ನಡೆಯುತ್ತಿತ್ತು ಮತ್ತು ಒಮ್ಮತಾಭಿಪ್ರಾಯದಿಂದ ಆ ವಿಷಯ ತೀರ್ಮಾನಿಸಲ್ಪಡುತ್ತಿತ್ತು. ಇದಲ್ಲದೇ ಬೇರೊಂದು ಸಭೆ ಸಹ ಇತ್ತು. ಅಲ್ಲಿ ದಿನನಿತ್ಯದ ವಿಷಯಗಳ ಮತ್ತು ಆವಶ್ಯಕತೆಗಳ ಬಗ್ಗೆ ಮಾತುಕತೆ ನಡೆಯುತ್ತಿತ್ತು. ಈ ಸಭೆ ಯಾವಾಗಲೂ ಮಸ್ಜಿದ್ ನಬವಿಯಲ್ಲಿ ಸಂಘಟಿಸಲಾಗುತ್ತಿತ್ತು. ಈ ಸಭೆಯಲ್ಲಿ ಕೇವಲ ಮುಹಾಜಿರ್ ಸಹಾಬರು ಭಾಗವಹಿಸುತ್ತಿದ್ದರು. ರಾಜ್ಯಗಳ ಮತ್ತು ಜಿಲ್ಲೆಗಳ ಅಧಿಕಾರಿಗಳನ್ನು ಹೆಚ್ಚಾಗಿ ಪ್ರಜೆಗಳ ಇಷ್ಟ ಪ್ರಕಾರ ಮತ್ತು ಕೆಲವೊಮ್ಮೆ ಚುನಾವಣೆಯ ಮೂಲಕ ನಿಶ್ಚಯಿಸಲಾಗುತ್ತಿತ್ತು. ಹುದ್ದೇದಾರರೊಡನೆ ಹಝ್ರತ್ ಉಮರ್(ರ) ಹೀಗೆ ಉಪದೇಶಿಸುತ್ತಿದ್ದರು: "ಜನರು ನಿಮ್ಮನ್ನು ನಕಲು ಮಾಡಲಿಕ್ಕೆ ಅಥವಾ ಅನುಸರಿಸಲಿಕ್ಕಾಗಿ ನಿಮ್ಮನ್ನು ಜನರ ನೇತಾರರನ್ನಾಗಿ ಕಳುಹಿಸಲಾಗುತ್ತಿದೆ. ಮುಸ್ಲಿಮರ ಹಕ್ಕುಗಳನ್ನು ಈಡೇರಿಸಿರಿ, ಅವರೊಡನೆ ಕಠಿಣವಾಗಿ ವರ್ತಿಸಬೇಡಿರಿ. ಯಾರನ್ನೂ ಅನಾವಶ್ಯಕವಾಗಿ ಹೊಗಳಬೇಡಿರಿ, ಬಹುಶಃ ಅವರು ಫಿತ್ನಕ್ಕೆ

ಗುರಿಯಾಗುವರು.” ತುರ್ಕಿ ಕುದುರೆಗಳಲ್ಲಿ ಸವಾರಿ ಮಾಡಬಾರದು, ತೆಳು ವಸ್ತ್ರಗಳನ್ನು ಧರಿಸಬಾರದು, ನುಣುಪಾದ ಗೋದಿಹಿಟ್ಟಿನಿಂದ ತಯಾರಿಸಿದ ರೊಟ್ಟಿಯನ್ನು ತಿನ್ನಬಾರದು, ಬಾಗಿಲಲ್ಲಿ ಕಾವಲುಗಾರರನ್ನು ನೇಮಿಸಬಾರದು ಎಂಬುದಾಗಿ ಅಧಿಕಾರಿಗಳಿಂದ ಪ್ರತಿಜ್ಞೆ ಪಡೆಯಲಾಗುತ್ತಿತ್ತು. ಅಧಿಕಾರಿಗಳ ಸಂಪತ್ತು ಮತ್ತು ಸಾಮಾನುಗಳನ್ನು ಪರಿಶೋಧಿಸಲಾಗುತ್ತಿತ್ತು. ಸಂಪತ್ತಿನ ಬಗ್ಗೆ ತೃಪ್ತಿಕರವಾದ ಕಾರಣಗಳು ನೀಡದಿದ್ದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು.

ಇರಾಕ್ ಮತ್ತು ಸಿರಿಯದ ಮೇಲೆ ವಿಜಯ ಸಾಧಿಸಲಾದ ನಂತರ ಭೂ ತೆರಿಗೆ ವ್ಯವಸ್ಥೆಯ ಕಡೆಗೆ ಹಝ್ರತ್ ಉಮರ್(ರ) ಗಮನಹರಿಸಿದರು. ಅರಸರು ವಶಪಡಿಸಿಕೊಂಡು ದರ್ಬಾರಿಗಳಿಗೆ ಮತ್ತು ಸರದಾರರಿಗೆ ನೀಡಿದ್ದ ಭೂಮಿಯನ್ನು ಅವರಿಂದ ಪಡೆದು ಹಝ್ರತ್ ಉಮರ್(ರ) ಪ್ರಾದೇಶಿಕ ಜನರಿಗೆ ಮರಳಿಕೊಟ್ಟರು. ಅದೇ ರೀತಿಯಲ್ಲಿ ಭೂ ತೆರಿಗೆಯ ಕಾನೂನನ್ನು ಸರಿಪಡಿಸಿಕೊಂಡು ವಸೂಲು ಮಾಡುವ ರೀತಿಯನ್ನು ಬಹಳ ಸುಗಮಗೊಳಿಸಿದರು. ಮುಸ್ಲಿಮೇತರ ಪ್ರಜೆಗಳಿಂದ ಹಝ್ರತ್ ಉಮರ್(ರ) ಅಭಿಪ್ರಾಯ ಕೇಳುತ್ತಿದ್ದರು ಮತ್ತು ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿದ್ದರು.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹಝ್ರತ್ ಖಲೀಫತುಲ್ ಮಸೀಹರು ಒಂದು ವೆಬ್‌ಸೈಟ್ ಲಾಂಚ್ ಮಾಡುವುದಾಗಿ ಘೋಷಿಸಿದರು.)

www.ahmadipedia.org ಈ ವೆಬ್‌ಸೈಟನ್ನು ಆರ್ಕೈವ್ ಮತ್ತು ರಿಸರ್ಚ್ ಸೆಂಟರ್‌ನ ಕೇಂದ್ರ ವಿಭಾಗ ತಯಾರಿಸಿದೆ. ಇದರಲ್ಲಿ ಸರ್ಚ್ ಇಂಜಿನಿನ ಶೈಲಿಯಲ್ಲಿ ಜಮಾಅತಿನ ಪುಸ್ತಕಗಳು, ವ್ಯಕ್ತಿಗಳು, ಘಟನೆಗಳು, ಅಧ್ಯಾಪನೆಗಳು ಮತ್ತು ಕಟ್ಟಡಗಳಿಗೆ ಸಂಬಂಧಿಸಿದ ವಿಷಯಗಳನ್ನು ಶೋಧಿಸಬಹುದಾಗಿದೆ. ಪ್ರತಿಯೊಂದು ಎಂಟ್ರಿಯೊಂದಿಗೆ ಸಂಬಂಧಪಟ್ಟ ವೆಬ್‌ಸೈಟ್ಸ್, ವೀಡಿಯೋಸ್ ಮತ್ತು ಜಮಾಅತಿನ ಪತ್ರಿಕೆಗಳಿಂದ ವಿಷಯಗಳ ಲಿಂಕನ್ನು ಒದಗಿಸಲಾಗುತ್ತದೆ. ಲೋಕದೆಲ್ಲಡೆ ಹರಡಿರುವ ಜಮಾಅತಿನ ಬಾಂಧವರ ಬಳಿ ಅನೇಕ ಪ್ರಯೋಜನಕರವಾದ ಮಾಹಿತಿಗಳು ಇರುತ್ತವೆ. ಅವು ಎಲ್ಲೂ ರೆಕಾರ್ಡ್ ಆಗಿರುವುದಿಲ್ಲ. ಅದಕ್ಕಾಗಿ ಈ ವೆಬ್‌ಸೈಟಿನಲ್ಲಿ Contribute ಎಂಬ ಒಂದು ಒಪ್ಶನ್ ಕೊಡಲಾಗಿದೆ. ಅದರಲ್ಲಿ ಯಾವನೇ ವ್ಯಕ್ತಿ ಯಾವುದೇ ವಿಷಯದ ಬಗ್ಗೆ ತನ್ನ ಅರಿವು ಅಥವಾ ಅನುಭವ ಅಥವಾ ಡೊಕ್ಯೂಮೆಂಟ್‌ಗಳನ್ನು ಒದಗಿಸಬಹುದಾಗಿದೆ. ಹೀಗೆ ಒದಗಿಸಲಾಗುವ ವಿಷಯಗಳನ್ನು ಸಂಶೋಧನೆ ಮತ್ತು ರುಜುವಾತು ಮಾಡಿದ ನಂತರ ಸಂಬಂಧಪಟ್ಟ ವಿಷಯದ ಎಂಟ್ರಿಯಲ್ಲಿ ಸೇರ್ಪಡೆ ಮಾಡಲಾಗುವುದು.

ಈ ವೆಬ್‌ಸೈಟಿನ ತಯಾರಿಯಲ್ಲಿ ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಹಂತಗಳನ್ನು ಐ.ಟಿ.ಯ ಕೇಂದ್ರ ವಿಭಾಗದ ಸ್ಥಿರ ಉದ್ಯೋಗಿಗಳು ಮತ್ತು ಸ್ವಯಂಸೇವಕರು ಅತ್ಯುತ್ತಮ ರೀತಿಯಲ್ಲಿ ಮುಗಿಸಿದ್ದಾರೆ. ವಿಷಯಗಳ ತಯಾರಿಯಲ್ಲಿ ಮತ್ತು ವಿಷಯಗಳನ್ನು ಪಡೆಯುವುದರಿಂದ ಹಿಡಿದು ತರ್ಜುಮೆ ಮತ್ತು ಅಪ್‌ಲೋಡಿಂಗ್ ತನಕದ ಎಲ್ಲ ಹಂತಗಳಲ್ಲಿ ಆರ್ಕೈವ್ ವಿಭಾಗದ ಮುರಬ್ಬಿಗಳು ಮತ್ತು ಸ್ವಯಂಸೇವಕರು ಅವಿಶ್ರಾಂತರಾಗಿ ಪರಿಶ್ರಮದಿಂದ ಕೆಲಸ ಮಾಡಿರುವರು. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲವನ್ನು ನೀಡಲಿ.

ಜುಮಾದ ನಂತರ ಇನ್‌ಶಾ ಅಲ್ಲಾಹ್ ಈ ವೆಬ್‌ಸೈಟನ್ನು ಲಾಂಚ್ ಮಾಡಲಾಗುವುದು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(*atba*)

*At, Masjid Mubarak, Islamabad, Tilford, UK, On 02-07-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon